Vijaya Karnataka

**Date:** 01-04-2022

**Page No:** 3 (supplement sheet)

**Edition:** Mysore

**Language:** Kannada

# ದೊಡ್ಡ ಕನಸು ಕಾಣಿ, ಉನ್ನತ ಮಟ್ಟಕ್ಕೇರಿ

## ಆಸ್ಟ್ರೇಲಿಯಾದ ಕಾಮನ್‌ವೆಲ್ತ್ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕಿ ಪಂಕಜಮ್ ಶ್ರೀದೇವಿ ಸಲಹೆ

■ **ವಿಕ ಸುದ್ದಿಲೋಕ** ಮೈಸೂರು

ಕಠಿಣ ಪರಿಶ್ರಮ ಮತ್ತು ಬದ್ಧತೆ ಇದ್ದರೆ ಯಶಸ್ಸು ನಿಶ್ಚಿತ ಎಂದು ಆಸ್ಟ್ರೇಲಿಯಾದ ಕಾಮನ್‌ವೆಲ್ತ್ ಬ್ಯಾಂಕ್ (ಭಾರತ) ವ್ಯವಸ್ಥಾಪಕ ನಿರ್ದೇಶಕಿ ಪಂಕಜಮ್ ಶ್ರೀದೇವಿ ಹೇಳಿದರು.

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮ್ಯಾನೇಜ್‌ಮೆಂಟ್ ಡೆವಲಪ್ಮೆಂಟ್ ಸಂಸ್ಥೆಯ (ಎಸ್‌ಡಿಎಂಐಎಂಡಿ) 27ನೇ ವಾರ್ಷಿಕ ಘಟಿಕೋತ್ಸವದಲ್ಲಿ ಗುರುವಾರ ಘಟಿಕೋತ್ಸವ ಭಾಷಣ ಮಾಡಿದ ಅವರು, ''ಕಠಿಣ ಪರಿಶ್ರಮಕ್ಕೆ ಪರ್ಯಾಯ ಮಾರ್ಗವಿಲ್ಲ. ಹಾಗಾಗಿ ಇತರರು ನಿಮ್ಮ ಬಗ್ಗೆ ಮಾತನಾಡುವ ವಿಷಯಗಳಿಗೆ ತಲೆ ಕೆಡಿಸಿಕೊಳ್ಳಬೇಡಿ,'' ಎಂದು ಕಿವಿಮಾತು ಹೇಳಿದರು.

''ವಿದ್ಯಾರ್ಥಿಗಳಾದ ನೀವು ದೊಡ್ಡ ಕನಸು ಕಾಣಬೇಕು. ಈ ರೀತಿ ಕನಸನ್ನು ನನಸು ಮಾಡಿಕೊಂಡವರು ಸಾಕಷ್ಟು ಜನರಿದ್ದಾರೆ. ಅದರಲ್ಲಿ ವೀರೇಂದ್ರ ಹೆಗ್ಗಡೆ, ಅಜೀಂ ಪ್ರೇಮ್ ಜಿ, ಕಿರಣ್ ಮಜುಂದಾರ್ ಅವರಂತಹ ಅನೇಕ ಮಹಾನ್ ನಾಯಕರು ದೊಡ್ಡ ಕನಸು ಕಂಡವರೆ. ಈ ಎಲ್ಲರಲ್ಲೂ ಸಾಮಾನ್ಯವಾದದ್ದು ಕಠಿಣ ಪರಿಶ್ರಮ,'' ಎಂದರು.

### ಎಸ್‌ಡಿಎಂಐಎಂಡಿ ಘಟಿಕೋತ್ಸವದಲ್ಲಿ ಚಿನ್ನ, ಬೆಳ್ಳಿ ಪದಕಕ್ಕೆ ಕೊರಳೊಡ್ಡಿದ ವಿದ್ಯಾರ್ಥಿಗಳು




ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮ್ಯಾನೇಜ್‌ಮೆಂಟ್ ಡೆವಲಪ್ಮೆಂಟ್ ಸಂಸ್ಥೆಯ ಘಟಿಕೋತ್ಸವದಲ್ಲಿ ಚಿನ್ನದ ಪದಕ ವಿಜೇತರೊಂದಿಗೆ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ, ಪಂಕಜಮ್ ಶ್ರೀದೇವಿ, ಡಾ.ಎಂ.ವಿ.ಸುನಿಲ್, ಪ್ರೊ.ಆರ್.ಇಂದಿರಾ ಮತ್ತಿತರರು.

### ನಿರ್ಧಾರ ಸಾಮರ್ಥ್ಯ ವೃದ್ಧಿಸಿಕೊಳ್ಳಿ

ವಿದ್ಯಾರ್ಥಿಗಳು ತಮ್ಮ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ತೀಕ್ಷ್ಣಗೊಳಿಸಬೇಕು ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಕಿವಿಮಾತು ಹೇಳಿದರು.

ಘಟಿಕೋತ್ಸವದಲ್ಲಿ ಮುಖ್ಯ ಭಾಷಣ ಮಾಡಿದ ಅವರು, ''ನೈತಿಕತೆ, ಸಾಮಾಜಿಕ ಜವಾಬ್ದಾರಿ ಮತ್ತು ಸುಸ್ಥಿರತೆಯ ಮೇಲೆ ಉತ್ತಮ ಆಧಾರದೊಂದಿಗೆ ಸೂಕ್ತವಾಗಿ ಬೆಳೆಯಬೇಕು. ಧರ್ಮಸ್ಥಳದಲ್ಲಿ ನಾವು ಶಿಕ್ಷಣದ ಈ ಅಂಶವನ್ನು ನಂಬಿದ್ದೇವೆ ಮತ್ತು ಇದು 25 ವರ್ಷಗಳ ಹಿಂದೆ ಎಸ್‌ಡಿಎಂಐಎಂಡಿ ಅನ್ನು ಸ್ಥಾಪಿಸುವಲ್ಲಿ ನಾವು ಹೊಂದಿದ್ದ ಉದ್ದೇಶಗಳಲ್ಲಿ ಒಂದಾಗಿದೆ,'' ಎಂದರು.

''ಭಾರತೀಯ ನೀತಿ, ಸಮಗ್ರತೆ, ಗೌರವ, ಕೃತಜ್ಞತೆ, ಸಾಮಾಜಿಕ ಜವಾಬ್ದಾರಿ ಮತ್ತು ಮೌಲ್ಯಗಳ ತಿಳಿವಳಿಕೆಗೆ ಪ್ರಾಮುಖ್ಯತೆ ನೀಡುತ್ತೇವೆ. ಪ್ರಸ್ತುತ ರಾಷ್ಟ್ರೀಯ ಶೈಕ್ಷಣಿಕ ನೀತಿಯು ಉನ್ನತ ಶಿಕ್ಷಣದ ಭಾಗವಾಗಿ ಈ ಸಾಮಾಜಿಕ ಮೌಲ್ಯಗಳನ್ನು ಚರ್ಚಿಸುವ ಮೊದಲು, ನಮ್ಮ ಎಲ್ಲಾ ಧರ್ಮಸ್ಥಳ ಸಂಸ್ಥೆಗಳು ವಿದ್ಯಾರ್ಥಿಗಳ ದೃಷ್ಟಿಕೋನ ಮತ್ತು ಅಂದಗೊಳಿಸುವಲ್ಲಿ ಇವುಗಳನ್ನು ಅನುಸರಿಸುತ್ತಿವೆ,'' ಎಂದರು.

### 177 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಘಟಿಕೋತ್ಸವದಲ್ಲಿ ಸಂಸ್ಥೆಯು 2020-2022ನೇ ಬ್ಯಾಚ್‌ನ 177 ವಿದ್ಯಾರ್ಥಿಗಳಿಗೆ ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್ (ಪಿಜಿಡಿಎಂ) ಅನ್ನು ಪ್ರದಾನ ಮಾಡಲಾಯಿತು. ಅತ್ಯುತ್ತಮ ಸಾಧನೆ ಮಾಡಿರುವ ಸಂಜನಾ ವಿಜಯಕುಮಾರ್ ಅವರು ಎರಡು ಚಿನ್ನದ ಪದಕಗಳನ್ನು ಪಡೆದುಕೊಂಡರು. ನಾನಾ ವಿಷಯಗಳಲ್ಲಿ ಶ್ರೇಷ್ಠಸಾಧನೆಗಾಗಿ ಒಟ್ಟಾರೆ ಒಂಭತ್ತು ಚಿನ್ನದ ಪದಕಗಳನ್ನು ಮೂವರು ವಿದ್ಯಾರ್ಥಿಗಳು ಹಾಗೂ ನಾಲ್ವರು ವಿದ್ಯಾರ್ಥಿನಿಯರು ಹಂಚಿಕೊಂಡರು. ಪಂಕಜಮ್ ಶ್ರೀದೇವಿ ಪದಕ ಪ್ರದಾನ ಮಾಡಿದರು. ಸಂಸ್ಥೆಯ ನಿರ್ದೇಶಕ ಡಾ.ಎನ್. ಆರ್.ಪರಶುರಾಮನ್, ವಾರ್ಷಿಕ ವರದಿ ಪ್ರಸ್ತುತಪಡಿಸಿದರು. ಡಾ.ಎಂ.ವಿ.ಸುನಿಲ್, ಪ್ರೊ.ಆರ್.ಇಂದಿರಾ, ಡಾ. ಸುರೇಂದ್ರಕುಮಾರ್, ಡಾ.ಎಸ್. ಎನ್.ಪ್ರಸಾದ್ ಮತ್ತಿತರರು ಇದ್ದರು.